Gramothan India Foundation

## Swatch Bharath: Area Cleanliness Program @ Uruvalu Gramothan Seva Centre

# ಬಂದಾರು ಗ್ರಾ.ಪಂ: ಸ್ವಚ್ಛತಾ ಕಾರ್ಯಕ್ರಮ



ಬಂದಾರು : ಬಂದಾರು ಗ್ರಾಮ ಪಂಚಾಯತ್ ಇದರ ಅಭಿವೃದ್ಧಿ ಸಪ್ತಾಹ ಗ್ರಾಮ ಸಂಭ್ರಮೋತ್ಸವದ ಪ್ರಯುಕ್ತ ಬೃಹತ್ ಸ್ವಚ್ಛತಾ ಕಾರ್ಯಕ್ರಮ, ಸ್ವಚ್ಛತಾ ಜಾಥಾ, ಸ್ವಚ್ಛತಾ ಜಾಗೃತಿ ಕಾರ್ಯಕ್ರಮ ಗ್ರಾಮದ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಬಂದಾರು ಪಂಚಾಯತ್ ವ್ಯಾಪ್ತಿಯ ಬಂದಾರು ಮತ್ತು ಮೊಗ್ರು ಪ್ರತಿ ವಾರ್ಡಿನಲ್ಲಿಯೂ ಯಶಸ್ವಿಯಾಗಿ ನಡೆಯಿತು.

ಬಂದಾರು ಗ್ರಾಮದ ಕೊಲ್ಯ ಎಂಬಲ್ಲಿ ಸ್ವಚ್ಛತಾ ಕಾರ್ಯಕ್ರಮಕ್ಕೆ ಗ್ರಾ.ಪಂ.ಅಧ್ಯಕ್ಷ ಉದಯ ಕುಮಾರ್.ಬಿ.ಕೆ ಚಾಲನೆ ನೀಡಿ ಪ್ರಧಾನಿ ದೇಶವನ್ನು ಸ್ವಚ್ಛತೆ ಕಡೆ ಕೊಂಡೊಯ್ಯಲು ಸ್ವಚ್ಛ ಭಾರತ್ ಯೋಜನೆಯನ್ನು ಜಾರಿಗೆ ತಂದು ಈ ನಿಟ್ಟಿನಲ್ಲಿ ಸ್ವಚ್ಛತೆಯಲ್ಲಿ ಪ್ರತಿಯೊಬ್ಬರೂ ಕೂಡ ಭಾಗವಹಿಸಿ ಗ್ರಾಮವನ್ನು ಸ್ವಚ್ಛ ಮಾಡುವ ಮೂಲಕ ಈ ದೇಶವನ್ನು ಸ್ವಚ್ಛಗೊಳಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕಾಗಿ ವಿನಂತಿಸಿಕೊಂಡರು. ಆಂದೋಲನದಲ್ಲಿ ಗ್ರಾಮದ ಶಾಲಾ ಅಧ್ಯಾಪಕರು, ವಿದ್ಯಾರ್ಥಿಗಳು, ಸಂಘಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದರು. ಮುಖ್ಯವಾಗಿ ಜೈ ಶ್ರೀರಾಮ್ ಗೆಳೆಯರ ಬಳಗದ ಅಧ್ಯಕ್ಷ ಚಂದ್ರಶೇಖರ.ಬಿ.ಕೆ, ಕಾರ್ಯದರ್ಶಿ ಕೃಷ್ಣ ಬಿ.ಕೆ ಹಾಗೂ ಎಲ್ಲಾ ಸದಸ್ಯರುಗಳು, ಸ್ಥಳೀಯರಾದ ರಾಧಕೃಷ್ಣ ಗೌಡ, ಪ್ರಕಾಶ್.ಬಿ.ಕೆ,ಹುಕ್ರಪ್ಪ ಗೌಡ, ವಸಂತ ಗೌಡ, ಅಶೋಕ್ ಪಾಂಜಾಳ, ಗ್ರಾಮೋತ್ಥಾನ ಸಮಿತಿಯ ಕ್ಷೇತ್ರ ಅಧಿಕಾರಿ ದುರ್ಗಾಪ್ರಸಾದ್, ವಿನಯಚಂದ್ರ, ಶೀನಪ್ಪ ಗೌಡ, ಪೂವಣಿ ಗೌಡ ಹಾಗೂ ಗ್ರಾ.ಪಂ.ಸದಸ್ಯರುಗಳಾದ ಶ್ರೀಮತಿ ವಿಜಯ, ಶ್ರೀಮತಿ ವಸಂತಿ, ಶ್ರೀಮತಿ ಚಂದ್ರಕಲಾ, ದಿನೇಶ್ ಗೌಡ, ಸುಂದರ ಪೂಜಾರಿ, ತಾ.ಪಂ.ಸದಸ್ಯರಾದ ಕೃಷ್ಣಯ್ಯ ಆಚಾರ್ಯ, ಶ್ರೀ ಕ್ಷೇತ್ರ ಧ.ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯರುಗಳು, ಹಾಲು ಉತ್ಪಾದಕ ಸಹಕಾರಿ ಸಂಘದ ಕಾರ್ಯದರ್ಶಿ, ಸದಸ್ಯರು, ಗ್ರಾ.ಪಂ. ಸಿಬ್ಬಂದಿಗಳು ಉಪಸ್ಥಿತರಿದ್ದರು. ಬಂದಾರು ಶಾಲಾ ಮಕ್ಕಳಿಂದ ಸ್ವಚ್ಛತಾ ಜಾಥಾ ಮತ್ತು ಸ್ವಚ್ಛತಾ ಜಾಗೃತಿ ಸಭಾ ಕಾರ್ಯಕ್ರಮ ನಡೆಯಿತು.